# ರನ್ ಮಷಿನ್!




**ಆಟ ಮತ್ತು ಫಿಟ್‌ನೆಸ್ ಎರಡರಲ್ಲೂ ಮುಂದಿರುವ ವಿರಾಟ್ ಕೊಹ್ಲಿ, ಈಗ ಸಚಿನ್ ತೆಂಡೂಲ್ಕರ್‌ರ ದಾಖಲೆಗಳನ್ನು ಅಳಿಸಿ ಹಾಕುವತ್ತ ಹೆಜ್ಜೆ ಇಟ್ಟಿದ್ದಾರೆ. ಕೊಹ್ಲಿಗೆ ಕೆಲವೇ ವರ್ಷಗಳಲ್ಲಿ ಇಷ್ಟೆಲ್ಲ ದಾಖಲೆಗಳು ಸಾಧ್ಯವಾದದ್ದು ಹೇಗೆ?**

■ **ಜಿ. ಶಿವಕುಮಾರ**

ಸಚಿನ್ ತೆಂಡೂಲ್ಕರ್ ಐದು ವರ್ಷಗಳ ಹಿಂದೆ 'ಶತಕಗಳ ಶತಕ' ಬಾರಿಸಿ ಕ್ರಿಕೆಟ್ ಲೋಕದಲ್ಲಿ ಹೊಸ ದಾಖಲೆ ಬರೆದಿದ್ದರು. ಈ ಅವಿಸ್ಮರಣೀಯ ಸಾಧನೆಗಾಗಿ ಅವರನ್ನು ಗೌರವಿಸಲು ಉದ್ಯಮಿ ಮುಖೇಶ್ ಅಂಬಾನಿ ಸಮಾರಂಭ ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನಟ ಸಲ್ಮಾನ್ ಖಾನ್, ವೇದಿಕೆಯಲ್ಲಿ ಸಚಿನ್ ಗುಣಗಾನ ಮಾಡುತ್ತಲೇ 'ನಿಮ್ಮ ದಾಖಲೆಯನ್ನು ಯಾರು ಮುರಿಯಬಲ್ಲರು' ಎಂಬ ಪ್ರಶ್ನೆಯನ್ನು ಅವರ ಮುಂದಿಟ್ಟಿದ್ದರು. ಆಗ ಸಚಿನ್ ಅರೆಕ್ಷಣವೂ ಯೋಚಿಸದೆ 'ವಿರಾಟ್ ಕೊಹ್ಲಿ' ಎಂದು ಉತ್ತರಿಸಿದ್ದರು. ಬ್ಯಾಟಿಂಗ್ ಮಾಂತ್ರಿಕ ತೆಂಡೂಲ್ಕರ್ 'ರನ್ ಯಂತ್ರ' ಕೊಹ್ಲಿ ಹೆಸರು ಹೇಳಲು ಕಾರಣವೂ ಇತ್ತು.

ಆಟದ ಬಗೆಗೆ ವಿರಾಟ್ ಹೊಂದಿದ್ದ ಶ್ರದ್ಧೆ ಮತ್ತು ಬದ್ಧತೆಯನ್ನು ಅವರು ಬಹಳ ಹತ್ತಿರದಿಂದ ನೋಡಿದ್ದರು. ಕೊಹ್ಲಿ ಕ್ರಿಕೆಟ್